ತುರುವೇಕೆರೆ ವಿದ್ಯುತ್ ಪ್ರಸರಣ ನಿಗಮದ ಬಗ್ಗೆ

31(21) -ಶ್ರೀ ಲಕ್ಷ್ಮೀನಾರಾಯಣ ಎಂ.ಡಿ ಆಣ್ಣಯ್ಯ (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಕೆ.ಪಿ.ಟಿ.ಸಿ.ಎಲ್.ನ ಕಛೇರಿಯಲ್ಲಿ ಲೈನ್‌ಮೆನ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಗ್ರಾಮಾಂತರ ಹಳ್ಳಿಗಳಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ನೋಡಿಕೊಳ್ಳಲು ಲೈನ್‌ಮನ್‌ಗಳನ್ನು ನಿಯೋಜಿಸಲಾಗುವುದೇ;

ಇ) ಕೊರತೆ ಇರುವ ಲೈನ್‌ಮನ್‌ಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೊಸ ನೇಮಕಾತಿ ಇಲ್ಲದಿರುವುದರಿಂದ ನಿವೃತ್ತಿ ನೌಕರರ ಜಾಗಗಳು ಖಾಲಿ ಉಳಿಯುತ್ತಿರುವುದರಿಂದ ಲೈನ್‌ಮನ್‌ಗಳ ಕೊರತೆ ಸ್ವಲ್ಪ ಮಟ್ಟಿಗೆ ಇದೆ.

ಆ) ಲೈನ್‌ಮನ್‌ಗಳ ಕೊರತೆಯನ್ನು ಸರಿದೂಗಿಸಲು ತಾತ್ಕಾಲಿಕ ಆಧಾರದ ಮೇಲೆ ಗ್ಯಾಂಗ್‌ಮನ್‌ಗಳನ್ನು ತೆಗೆದುಕೊಂಡು ವಿದ್ಯುತ್ ಸರಬರಾಜು ಸಮರ್ಪಕವಾಗಿ ನೀಡಲು ನಿಯೋಜಿಸಲಾಗಿದೆ.

ಇ) ತಾತ್ಕಾಲಿಕ ಗ್ಯಾಂಗಮನ್‌ಗಳನ್ನು ನೇಮಿಕೊಂಡು ವಿದ್ಯುತ್ ಪೂರೈಕೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.

ತುರುವೇಕೆರೆ ತಾಲ್ಲೂಕ ಸಂಪಿಗೆ ವ್ಯಾಪ್ತಿಯಲ್ಲಿ ವಿದ್ಯುತ್ ಉಪ ಸ್ಥಾವರ ನಿರ್ಮಾಣ

32(22) -ಶ್ರೀ ಲಕ್ಷ್ಮೀನಾರಾಯಣ ಎಂ.ಡಿ ಆಣ್ಣಯ್ಯ (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದಂಡಿನ ಶಿವರ ಹೋಬಳಿ ಸಂಪಿಗೆ ಬಳಿ ರಾಘದೇವನಾಲ ಸರ್ವೆ ನಂಬರ್‌ನಲ್ಲಿ ವಿದ್ಯುತ್ ಉಪಸ್ಥಾವರ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಗುವುದು;

ಆ) ಈ ವರ್ಷ ಪ್ರಾರಂಭ ಮಾಡಲಾಗುವುದೇ?

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನ ಸಂಪಿಗೆಯಲ್ಲಿ ಒಂದು 110:11 ಕೆ.ವಿ., 1 10 ಎಂ.ವಿ.ಎ. ಸಾಮರ್ಥ್ಯದ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಿತ ಉಪ ಕೇಂದ್ರಕ್ಕೆ ತಾಂತ್ರಿಕ ಸಮಿತಿಯು ಅನುಮೋದನೆ ನೀಡಿದ್ದು, ಉಪ ಕೇಂದ್ರಕ್ಕೆ ಬೇಕಾಗುವ ಭೂಮಿಯನ್ನು ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ.